ಅಸಲು ದಾವಾ ನಂ. 17/2021 ಡಿಡಬ್ಲೂ : 2

ದಿನಾಂಕಃ 06-03-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

ದಿಃ 24-01-2024 ರಂದು 2, 6 ಹಾಗೂ 9 ನೇ ಪ್ರತಿವವಾದಿಯರ ವಕೀಲರು ಮುಂದುವರೆದ ಮುಖ್ಯ ವಿಚಾರಣೆ ಇಲ್ಲ ಎಂದು ಹೇಳಿರುತ್ತಾರೆ .

8 ನೇ ಪ್ರತಿವಾದಿಯ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ .

**ಪಾಟೀ ಸವಾಲುಃ 1 ಮತ್ತು 12 ನೇ ಪ್ರತಿವಾದಿಯರ ಪರವಾಗಿಃ ಶ್ರೀ ಡಿ ಎಸ್ ಬಿ ವಕೀಲರಿಂದಃ**

3. ನನಗೆ ವಾದಿಯರು ಹಾಗೂ 1 ಮತ್ತು 12 ನೇ ಪ್ರತಿವಾದಿಯರ ಕುಟುಂಬದ ಬಗ್ಗೆ ಎಲ್ಲಾ ಮಾಹಿತಿ ಇದೆ ಎಂದರೆ ಸರಿ . ವಾದಿಯರು ಮತ್ತು 1 ನೇ ಪ್ರತಿವಾದಿಯು ನನ್ನ ತಂದೆಯ ಅಕ್ಕನ ಮಕ್ಕಳಾಗಿರುತ್ತಾರೆ . ವಾದಿಯರು, 1 ನೇ ಪ್ರತಿವಾದಿಯು ಹಾಗೂ ಅವರ ತಾಯಿ ದಾವಾ ಆಸ್ತಿಗಳ ದೇಖರೇಖ್ ನೋಡಿಕೊಳ್ಳಲು , ವಹಿವಾಟು ಮಾಡಲಿಕ್ಕೆ , ಮಾರಾಟ ಮಾಡಲು ಎಲ್ಲಾ ಅಧಿಕಾರಗಳನ್ನು ನೀಡಿ ನನಗೆ ಜಿಪಿಎ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ . ಸದರಿ ಜಿಪಿಎ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಡಿ-1 ಜಿಪಿಎ ಪತ್ರವನ್ನು ನೋಡಿ ಗುರುತಿಸಿರುತ್ತಾರೆ. ಶಾರದಾ ವಿಶ್ವೇಶ್ವರ ಗೋಪಿರವರು ಸಹ ನನಗೆ ಜಿಪಿಎ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ಜಿಪಿಎ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಡಿ-2 ಜಿಪಿಎ ಪತ್ರವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಜಿಪಿಎ ಪತ್ರಗಳ ಆಧಾರದ ಮೇರೆಗೆ ನಾನು ಕ್ರಯದ ಮಾತುಕತೆ ಮಾಡಿದ ಸಂದರ್ಭದಲ್ಲಿ ವಾದಿಯರು , 1 ನೇ ಪ್ರತಿವಾದಿ ಹಾಗೂ ಮೇಲೆ ಹೇಳಿದ ಶಾರದಾ ಗೋಪಿರವರು ಇದ್ದರು.

4. ನಿಡಿ-1 ರ ಆಧಾರದ ಮೇರೆಗೆ ವಾದಿಯರ ಹಾಗೂ 1 ನೇ ಪ್ರತಿವಾದಿಯ ಆಸ್ತಿಗಳ ರಕ್ಷಣೆಯ ಕುರಿತು ನಾನು ಕುಮಟಾದ ಪ್ರಧಾನ ಸಿವಿಲ್ ಜಡ್ಜ ನ್ಯಾಯಾಲಯದಲ್ಲಿ ಮೂಲ ದಾವೆ ನಂ. 135/2011 ನ್ನು ದಾಖಲು ಮಾಡಿರುತ್ತೇನೆ. ಬಾಲಚಂದ್ರ ಗಣಪತಿ ಪ್ರಸಾದರವರು ಕುಮಟಾದ ಪ್ರಧಾನ ಸಿವಿಲ್ ಜಡ್ಜ

ನ್ಯಾಯಾಲಯದಲ್ಲಿ ಈ ದಾವೆಯ ವಾದಿಯರು ಹಾಗೂ 1 ಮತ್ತು 6 ನೇ ಪ್ರತಿವಾದಿಯ ವಿರುದ್ಧ ದಾಖಲು ಮಾಡಿರುವ ಮೂಲ ದಾವೆ ನಂ. 139/2015 ರಲ್ಲಿ ಅವರಿಗೆ ಸಮನ್ಸ ಜಾರಿಯಾದ ನಂತರ ಅವರ ಸೂಚನೆಯ ಮೇರೆಗೆ ನಾನು ಆ ದಾವೆಯಲ್ಲಿ ನಾನು ಅವರ ಪರವಾಗಿ ನಿಡಿ–1 ಜಿಪಿಎ ನಾತೆಯಿಂದ ಹಾಜರಾಗಿರುತ್ತೇನೆ ಎಂದರೆ ಸರಿ . ನಾನು ಮತ್ತು 1 ನೇ ಪ್ರತಿವಾದಿಯು ಒಳಸಂಚು ನಡೆಸಿ ವಾದಿಯರಿಗೆ ತಿಳಿಯದಂತೆ ಕ್ರಯದ ವ್ಯವಹಾರ ಮಾಡಿರುತ್ತೇವೆ ಎಂದು ವಾದಿಯರು ಹೇಳಿರುವುದು ಶುದ್ಧ ಸುಳ್ಳಾಗಿರುತ್ತದೆ . ಕ್ರಯದ ಪ್ರತಿಫಲದ ಹಣವನ್ನು ನಾನು ವಾದಿಯರು ಹಾಗೂ 1 ನೇ ಪ್ರತಿವಾದಿಯ ಸಮಕ್ಷಮ ಅವರ ತಾಯಿಗೆ ಕೊಟ್ಟಿರುತ್ತೇನೆ ಹಾಗೂ ಶಾರದಾ ಗೋಪಿರವರ ಹಣವನ್ನು ಶಾರದಾ ಗೋಪಿರವರಿಗೆ ಕೊಟ್ಟಿರುತ್ತೇನೆ. ವಾದಿಯರ ತಾಯಿ ಸದರಿ ಹಣವನ್ನು ನನ್ನಿಂದ ಪಡೆದುಕೊಂಡ ನಂತರ ಅದನ್ನು ವಾದಿಯರು ಹಾಗೂ 1 ನೇ ಪ್ರತಿವಾದಿಗೆ ಹಂಚಿರುತ್ತಾರೆ .

3 ರಿಂದ 5, 7 ಮತ್ತು 10 ನೇ ಪ್ರತಿವಾದಿಯರು ಏಕಪಕ್ಷೀಯರಾಗಿರುತ್ತಾರೆ .

11 ನೇ ಪ್ರತಿವಾದಿ ಹಾಗೂ ವಾದಿಯರ ಪರವಾಗಿ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.